## ಉಗ್ರ ಪದಪುಂಜಗಳಿಂದ ನೆಮ್ಮದಿ ಭಂಗ

‘ನಿಗಿ ನಿಗಿ ಕೆಂಡವಾದ ನಾಯಕ’, ‘ನಗು ನಗುತ್ತಲೆ ಮಾತಾಡಿರುತ್ತಾರೆ’, ‘ನಾಲಗೆ ಹರಿಬಿಟ್ಟ ನಾಯಕ’, ‘ಬೆಂಕಿ ಉಗುಳಿದ ನಾಯಕ’, ‘ಸಿಡಿಗುಂಡಿನಂತಾದ ನಾಯಕ’ – ಇವು ನಮ್ಮ ಸುದ್ದಿ ವಾಹಿನಿಗಳು ರಾಜಕಾರಣಿಗಳಿಗೆ ಬಳಸುವ ಪದಪುಂಜ. ಇದರಿಂದ ವೀಕ್ಷಕರ ನೆಮ್ಮದಿಯ ಭಂಗ. ಇಂತಹ ಪದಪುಂಜ ಬಳಸಿ ವೀಕ್ಷಕರನ್ನು ಕೆರಳಿಸಿದರೆ ಆ ವಾಹಿನಿಗಳಿಂದ ವೀಕ್ಷಕರು ವಿಮುಖವಾಗುವುದೇ ಹೆಚ್ಚು. ಕುಟುಂಬದವರೆಲ್ಲ ಕುಳಿತು ನೋಡುವ ಕಾರ್ಯಕ್ರಮಗಳಲ್ಲಿ ಸ್ವಾರಸ್ಯಕರ ಭಾಷೆ ಬಳಸಿದರೆ ನೆಮ್ಮದಿಯಿಂದ ವೀಕ್ಷಿಸಬಹುದು.

–ಚಿಕ್ಕೋಬನಹಳ್ಳಿ ಚಾಂದ್ ಬಾಷ

## ಭಾವ ಸ್ಪಷ್ಟ ಚಿತ್ರಾ ಗಾಯನ

ಝೀ ಕನ್ನಡದ ‘ಸರಿಗಮಪ’ ಕಾರ್ಯಕ್ರಮಕ್ಕೆ ಗಾಯಕಿ ಕೆ.ಎಸ್. ಚಿತ್ರಾ ವಿಶೇಷ ಅತಿಥಿಯಾಗಿ ಬಂದಿದ್ದರು. ಅವರು ಒಂದೆರಡು ಹಾಡನ್ನೂ ಹಾಡಿದರು. ಮಲೆಯಾಳಂ ಅವರ ಮಾತೃಭಾಷೆ ಆಗಿದ್ದರೂ ಕನ್ನಡದ ಸ್ಪಷ್ಟ ಉಚ್ಚಾರಣೆ, ಹಾಡಿಗೆ ಭಾವ–ಜೀವ ತುಂಬಿ ಹಾಡಿದ್ದು ಗಮನಸೆಳೆಯಿತು. ತಮ್ಮ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದರೂ ಅವರ ಸರಳತೆ ನೋಡಿ ಖುಷಿಯಾಯ್ತು. ಹೊಸ ಗಾಯಕರು ಇಂತಹವರನ್ನು ನೋಡಿ ಕಲಿಯಲು ಬಹಳಷ್ಟಿದೆ.

–ರಾಘವೇಂದ್ರ ಜೋಯಿಸ್, ಮೈಸೂರು

## ಶುಭ‘ಮಸ್ತು’ವಿಗೆ ಕಲಾವಿದರ ಅನುಭವದ ಶ್ರೀರಕ್ಷೆ

ಹಿರಿಯ ಕಲಾವಿದರಾದ ವೆಂಕಟರಾವ್ ಹಾಗೂ ಸುಧಾರಾಣಿ ಅವರ ಮನಮುಟ್ಟುವ ಅಭಿನಯದಿಂದ ಗಮನ ಸೆಳೆಯುತ್ತಿರುವ ಝೀ ಕನ್ನಡದ ‘ಶ್ರೀರಸ್ತು ಶುಭಮಸ್ತು’ ಅಪರೂಪದ ಧಾರಾವಾಹಿ ಎಂದೆನಿಸುತ್ತಿದೆ. ಸಂಗಾತಿಯನ್ನು ಕಳೆದುಕೊಂಡವರ ಮನೋವೇದನೆಯ ಅಭಿವ್ಯಕ್ತಿಯ ಜೊತೆಗೆ, ವಯಸ್ಸಾದ ಮೇಲೆ ಕಾಡುವ ಮರೆವಿನ ಕಾಯಿಲೆಯ ಬಗ್ಗೆ ಬೆಳಕು ಚೆಲ್ಲಿ ಮನಸ್ಸಿಗೆ ಹತ್ತಿರವಾಗುತ್ತದೆ. ಸೊಸೆ ತುಳಸಿ ಬಗ್ಗೆ ಮೆಚ್ಚುಗೆ ಸೂಚಿಸಿದ ಮರುಕ್ಷಣದಲ್ಲೇ ಆಕೆಯನ್ನು ಬೈಯುವ ದತ್ತನ ಪಾತ್ರ ಬಹಳ ಇಷ್ಟವಾಗುತ್ತದೆ.

ಸಮರ್ಥ ಮಾಡಿದ ಕಾಫಿಯನ್ನು ದತ್ತ ಕಲಗಚ್ಚಿಗೆ ಹೋಲಿಸಿದರೆ, ದತ್ತ ಮಾಡಿದ ಕಾಫಿ ಕಲಗಚ್ಚಿಗಿಂತ ಕೆಟ್ಟದಾಗಿದೆ ಎಂದು ಸಮರ್ಥ ಹೇಳುತ್ತಾನೆ. ಆಗ ದತ್ತ ‘ಇನ್ನು ಮೇಲೆ ನೀನು ಕಲಗಚ್ಚನ್ನೇ ಕುಡಿ’ ಎನ್ನುವಾಗ ನಗೆ ಸಹಜವಾಗಿಯೇ ಉಕ್ಕುತ್ತದೆ. ಇತರ ಎಲ್ಲ ಧಾರಾವಾಹಿಗಳಂತೆ ಇಲ್ಲಿಯೂ ಅನಿವಾರ್ಯವಾಗಿ ಮನೆಮುರುಕ ಸೊಸೆ, ಅಂಗವಿಕಲ ಮಗ, ನೆಟ್ಟಗಿರುವವರಿಗೆ ಕಿರುಕುಳ ಎಲ್ಲ ಇದ್ದರೂ ಒಳ್ಳೆಯ ಅಂಶಗಳು ಹೆಚ್ಚಿವೆ. ರಿಚರ್ಡ್ ಲೂಯಿಸ್, ಸದಾನಂದ ಮತ್ತು ಸುಶ್ಮಿತಾ ಅವರ ಒಳ್ಳೆಯ ಅಭಿನಯವಿದೆ.

–ವಾ. ಮುರಳೀಧರ, ತೀರ್ಥಹಳ್ಳಿ

ವಾರದ ಪತ್ರ

## ಗಣತಂತ್ರ ಪರೇಡ್‌ನಲ್ಲಿ ‘ನಾರೀಶಕ್ತಿ’ಯ ಹೆಮ್ಮೆ

ಗಣರಾಜ್ಯೋತ್ಸವದ ಪ್ರಯುಕ್ತ ದೆಹಲಿಯಲ್ಲಿ ಜರುಗಿದ ಪರೇಡ್ ಕಣ್ಮನ ಸೂರೆಗೊಂಡಿತು. ದೇಶದ ನಾನಾ ರಾಜ್ಯಗಳನ್ನು ಪ್ರತಿನಿಧಿಸಿದ್ದ ಸ್ತಬ್ಧಚಿತ್ರಗಳು ವೈವಿಧ್ಯದಿಂದ ಭವ್ಯತೆಯನ್ನು ಮೆರೆದವು. ಪಥಸಂಚಲನದಲ್ಲಿ ಮೊದಲ ಬಾರಿಗೆ ಮಹಿಳಾ ಸೈನ್ಯಾಧಿಕಾರಿಗಳು ಭಾಗವಹಿಸಿದ್ದರು. ಸ್ತ್ರೀ ಸಬಲೀಕರಣ ಚಿಂತನೆಯನ್ನು ಒಡಮೂಡಿಸುವಂತೆ ಮಹಿಳೆಯರ ದಂಡು ಗಮನಸೆಳೆಯಿತು. ಸ್ತ್ರೀ, ಪುರುಷನಷ್ಟೇ ಸಮಾನ ಸಾಮರ್ಥ್ಯ ಉಳ್ಳವಳು ಎಂಬುದನ್ನು ಬಿಂಬಿಸಿತು. ಸಾಲುಮರದ ತಿಮ್ಮಕ್ಕ, ತುಳಸಿ ಗೌಡ ಹಾಲಕ್ಕಿ ಹಾಗೂ ಸೂಲಗಿತ್ತಿ ನರಸಮ್ಮ ಅವರ ಸಾಧನೆಗಳನ್ನು ಬಿಂಬಿಸಿದ ಸ್ತಬ್ಧಚಿತ್ರ ರಾಜ್ಯದ ಹಿರಿಮೆಯ ಪ್ರತೀಕವಾಗಿತ್ತು.

–ಪೂರ್ಣಿಮಾ ಮೂರ್ತಿ, ಬೆಂಗಳೂರು

## ‘ಚಂದನ’ದಿಂದ ಮನೆಮಂದಿಗೆ ಮಜಾ

ಪ್ರಕೃತಿಯ ಸೊಬಗು ನೋಡಲು, ಪ್ರಸ್ತುತ ವಿಷಯ–ವಿದ್ಯಮಾನ ಅರಿಯಲು, ಶಿಕ್ಷಣ, ಪ್ರವಾಸೋದ್ಯಮ, ಆರೋಗ್ಯ, ಸುಮಧುರ ಸಂಗೀತ ಕೇಳಲು, ಕೃಷಿ, ಪಶುಸಂಗೋಪನೆ, ಅತ್ಯುತ್ತಮ ಮನರಂಜನೆಗೆ, ಯಾವುದೇ ಮುಜುಗರವಿಲ್ಲದೆ ಮನೆ ಮಂದಿಯೆಲ್ಲಾ ವೀಕ್ಷಿಸುವ ವಾಹಿನಿ ಎಂದರೆ ಅದು ‘ಚಂದನ’.

–ಡಿ.ಕೆ. ಅನ್ನಪೂರ್ಣದೇವಿ, ಕ್ಯಾತ್ಸಂದ್ರ

## ಇದ್ಯಾವ ಶಾಸ್ತ್ರ ಕನ್ನಡತಿ?

ಕಲರ್ಸ್ ಕನ್ನಡ ವಾಹಿನಿಯ ‘ಕನ್ನಡತಿ’ಯಲ್ಲಿ ಹರ್ಷನನ್ನು ಮದುವೆಯಾಗಲು ವರೂಧಿನಿ ದೇವತಾ ಕಾರ್ಯ ಮಾಡಿಸಿಕೊಳ್ಳುತ್ತಾಳೆ. ವಿಚಿತ್ರವೆಂದರೆ, ಈ ದೇವತಾ ಕಾರ್ಯದ ಸಂದರ್ಭದಲ್ಲಿ ಪುರೋಹಿತರು ಮತ್ತು ವರೂಧಿನಿ ಇಬ್ಬರೇ ಇದ್ದರು. ಪುರೋಹಿತರೇ ಆಕೆಯ ಕೈಗೆ ಕಂಕಣ ಕಟ್ಟಿ ಶಾಸ್ತ್ರ ಮುಗಿಸುತ್ತಾರೆ. ಇಂತಹ ಸಂದರ್ಭದಲ್ಲಿ ವಧು–ವರರ ಪೋಷಕರು ಮತ್ತು ಹತ್ತಿರದ ಸಂಬಂಧಿಗಳು ಇರುವುದು ಪದ್ಧತಿ. ವರೂಧಿನಿ, ಹರ್ಷನನ್ನು ಬುಟ್ಟಿಗೆ ಹಾಕಿಕೊಳ್ಳುವ ಧಾವಂತದಲ್ಲಿ ಸಂಪ್ರದಾಯಗಳಿಗೆ ತಿಲಾಂಜಲಿ ನೀಡುವುದೇನೋ ಸರಿ. ಆದರೆ, ಶಾಸ್ತ್ರವನ್ನು ಸದಾ ಪಾಲಿಸುವ ಪುರೋಹಿತರು ಇದಕ್ಕೆ ಸಾಥ್ ನೀಡಿರುವುದು ಆಶ್ಚರ್ಯ.

–ರಮಾನಂದ ಶರ್ಮಾ, ನವದೆಹಲಿ



## ದ್ವಂದ್ವಾರ್ಥ-ಬಡಿದಾಟ ಹಾಸ್ಯಕ್ಕೆ ಬೇಕೆ?

ಝೀ ಕನ್ನಡದ ‘ಕಾಮಿಡಿ ಕಿಲಾಡಿಗಳು’ ಶೋ ನಕ್ಕು–ನಗಿಸುವ ಉದ್ದೇಶ ಚೆನ್ನಾಗಿದೆ. ಆದರೆ ನಗಿಸಲು ಆಯ್ಕೆ ಮಾಡಿಕೊಂಡ ಸನ್ನಿವೇಶ ಮತ್ತು ಅದರ ಸಾಹಿತ್ಯ ಬರೀ ದಾಂಪತ್ಯಕ್ಕೆ ಸಂಬಂಧಿಸಿದ್ದೇ ಆಗಿರುತ್ತದೆ. ಅದರಲ್ಲೂ ಡಬ್ಬಲ್ ಮೀನಿಂಗ್ ಪದಗಳೇ ಹೆಚ್ಚು. ಒದೆಯುವುದು, ಬಡಿಯುವುದು, ಅತಿರೇಕದ ಮಾತುಗಳು ವಿಕೋಪಕ್ಕೆ ಹೋಗುತ್ತವೆ. ಎಷ್ಟೋ ಸಂದರ್ಭಗಳಲ್ಲಿ ತೀರ್ಪುಗಾರರಾದ ರಕ್ಷಿತಾ ಮುಜುಗರ ವ್ಯಕ್ತಪಡಿಸಿದ್ದಾರೆ. ದಾಂಪತ್ಯ ಮತ್ತು ದ್ವಂದ್ವಾರ್ಥವನ್ನು ಹೊರತುಪಡಿಸಿ ಹಾಸ್ಯ ರೂಪಿಸಿದರೆ ಮನೆಮಂದಿಯೆಲ್ಲ ಕೂತು ನೋಡಬಹುದಲ್ಲವೇ?

–ಮಂಜಪ್ಪ ಹೆಚ್., ಭದ್ರಾವತಿ

## ‘ಮಾಣಿಕ್ಯ’ಕ್ಕೆ ಬೇಕು ಹೆಚ್ಚು ಸಮಯ

ಚಂದನದಲ್ಲಿ ‘ಮರೆಯದ ಮಾಣಿಕ್ಯ’ ಚೆನ್ನಾಗಿ ಮೂಡಿಬರುತ್ತಿದೆ. ಇತ್ತೀಚಿನ ಸಂಚಿಕೆಯಲ್ಲಿ ಹೆಚ್. ಆರ್.ಕೆ. ಪ್ರಸಾದ್ ಹಾಗೂ ಶ್ರೀಲಕ್ಷ್ಮೀ ಯುಗಳ ಗೀತೆಗಳನ್ನು ಬಹಳ ಚೆನ್ನಾಗಿ ಪ್ರಸ್ತುತಪಡಿಸಿದರು. ಚೆಂದದ ಹಾಡುಗಳಿಗೆ ಇನ್ನೂ ಮೂವತ್ತು ನಿಮಿಷ ಜಾಸ್ತಿ ಕೊಟ್ಟರೆ ವೀಕ್ಷಕರು ನಾಲ್ಕು ಹಾಡುಗಳನ್ನು ಜಾಸ್ತಿ ಕೇಳಬಹುದು. ಮುಂದಿನ ಕಂತಿನಲ್ಲಿ ಸಮಯಾವಕಾಶ ಜಾಸ್ತಿ ಕೊಡಬೇಕಾಗಿ ವಿನಂತಿ.

–ಮೇಘನಾ ರಘುನಂದನ್, ಹೂವಿನಹಡಗಲಿ

## ಆಪ್ತವೆನ್ನಿಸಿದ ವಚನ ಗಾಯನ-ವ್ಯಾಖ್ಯಾನ

‘ಆಯುಷ್’ ವಾಹಿನಿಯಲ್ಲಿ ಇತ್ತೀಚೆಗೆ ಬಸವಣ್ಣ ಅವರ ವಚನಗಳನ್ನು ಶಶಿಧರ್ ಕೋಟೆ ತುಂಬಾ ಅರ್ಥವತ್ತಾಗಿ ಹಾಡಿ ಮೈಮರೆಸಿದರು. ವಚನಗಳ ಮಹತ್ವವನ್ನು ಗುರುರಾಜ ಕರಜಗಿ ಮಾರ್ಮಿಕವಾಗಿ ನಿರೂಪಿಸಿದರು. ಮನಸ್ಸಿಗೆ ಹತ್ತಿರವಾಗುವ ಇಂತಹ ಕಾರ್ಯಕ್ರಮ ಹೆಚ್ಚು ಹೆಚ್ಚು ಬರಲಿ.

–ಭಾರತೀ ಗಂಗಾಧರ್, ಬೆಂಗಳೂರು